<u>ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚನ್ನಪಟ್ಟಣ.</u>

**<u>ಸಿ.ಸಿ. 1074/2018</u>**

ಫಿರ್ಯಾಧಿದಾರರು : ಚನ್ನಪಟ್ಟಣ ಪುರ ಪೊಲೀಸ್ ಠಾಣೆ

-- ವಿರುದ್ಧ--

ಆರೋಪಿತರು : **1.** ಶ್ರೀ.ಯೋಗೇಶ್
ಬಿನ್ ರಾಮಚಂದ್ರ ,
37 ವರ್ಷ,
ವಾಸಃ ಸುಳ್ಳೇರಿ ಗ್ರಾಮ,
ವೀರೂಪಾಕ್ಷಪುರ ಹೋಬಳಿ,
ಚನ್ನಪಟ್ಟಣ ಟೌನ್.

<u>ದಂಡ ಪ್ರಕ್ರಿಯಾ ಸಂಹಿತೆ **313** ರ ಅಡಿಯಲ್ಲಿ ಆರೋಪಿತನ ಹೇಳಿಕೆ</u>

1. ನೀವು ಫಿರ್ಯಾದುದಾರ ಪರ ಸಾಕ್ಷ್ಯ ನುಡಿದಿರುವುದನ್ನು ಕೇಳಿರುವಿರಾ?

   ಉತ್ತರ ಃ

2. ಪ್ರಾಸಾ.1/ಶ್ರೀ.ಅಪ್ಪಾಜಿ ಹೆಚ್, ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ, ದಿ.26.08.2018 ರಂದು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತ ನಿರ್ದೇಶಕರುಗಳ ಚುನಾವಣೆಗೆ ತಹಸಿಲ್ದಾರವರು ತನ್ನನ್ನು ನೇಮಕ ಮಾಡಿದ್ದರು. ತನ್ನನ್ನು ಪಿ ಆರ್ ಓ ಆಗಿ ಚಾಸಾ-2 ರವರನ್ನು ಎ ಪಿ ಆರ್ ಓ ಆಗಿ ನೇಮಕ ಮಾಡಿದ್ದರು. ದಿ.26.08.2018 ರಂದು ಬೆಳಿಗ್ಗೆ 9.00 ಗಂಟೆಗೆ ಚುನಾವಣೆ ಪ್ರಾರಂಭವಾಗಿ ಮದ್ಯಾಹ್ನ 2.45 ವರೆಗೂ ಚುನಾವಣೆ ನಡೆಯುತ್ತಿತ್ತು. ಮತದಾನ ಮಾಡಲು ಐದು- ಆರು ಜನ ಕ್ಯೂ ನಲ್ಲಿ ಬರುತ್ತಿದ್ದರು ಎ ಪಿ ಆರ್ ಓ ರವರು ಬ್ಯಾಲೇಟ್ ಪೇಪರ್ ಅನ್ನು ಮತದಾರರಾಗಿ ಕೊಡುತ್ತಿದ್ದರು ನಾನು ಬ್ಯಾಲೇಟ್ ಪೇಪರ್ ಅನ್ನು ಮಡಚಿ ಸಹಿ ಮಾಡಿ ಕೊಡುತ್ತಿದ್ದೆ ಅಗ ಒಬ್ಬ ಅಪರಿಚಿತ ವ್ಯಕ್ತಿಯೊಬ್ಬ ಬ್ಯಾಲೇಟ್ ಬಾಕ್ಸ್ ಒಳಗೆ ಶಾಹಿ ಹಾಕಿದ ಹಾಗೆ ಅನಿಸಿ ಅವನನ್ನು ಹಿಡಿದು ಕೊಂಡು ಅವನನ್ನು ಪೋಲೀಸರ ವಶಕ್ಕೆ ಕೊಟ್ಟಿರುತ್ತೇನೆ. ಆದರೆ ಆ ವ್ಯಕ್ತಿಯ ಮುಖ ಪರಿಚಯ ಆಗಲಿಲ್ಲ. ನಂತರ ತಾನು ಪೋಲೀಸರಿಗೆ ಘಟನೆಯ ಬಗ್ಗೆ ದೂರನ್ನು ಕೊಟ್ಟಿರುತ್ತೇನೆ. ಸದರಿ ದೂರನ್ನು ನಿಪಿ-1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ತನ್ನ ಸಮಕ್ಷಮ ಅರೋಪಿಯನ್ನು ಶೋಧನೆ ಮಾಡಿ ಅಂಗಶೋದನೆ ಪಂಚನಾಮೆ ಮಾಡಿದರು ಸದರಿ ಪಂಚನಾಮೆಯನ್ನು ನಿಪಿ-2 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಈ

ಹಂತದಲ್ಲಿ ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಸದರಿ ಸಹಿಯನ್ನು ಪೋಲೀಸರು ಆರೋಪಿಯನ್ನು ವಶಕ್ಕೆ ಪಡೆದುಕೊಳ್ಳುತ್ತೇವೆ ಎಂದು ಹೇಳಿ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ದಾಖಲೆಯು ಸ್ಥಳ ಪಂಚನಾಮೆಯಾಗಿದ್ದು ಅದನ್ನು ನಿಪಿ-3 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3 ಎ ಎಂದು ಗುರುತಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ

3. ಪ್ರಾಸಾ.4/ಸೋಮಶೇಖರ ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ, ತನ್ನನ್ನು ಎ ಆರ್ ಓ ಆಗಿ ಮತ್ತು ಚಾಸಾ-1 ರವನ್ನು ಪಿ ಆರ್ ಓ ಆಗಿ ನೇಮಕ ಮಾಡಿದ್ದರು. ಬೆಳಿಗ್ಗೆ ಚುನಾವಣೆ ನಡೆಯುತ್ತಿತ್ತು ಹೊರಗಡೆ ಜನ ಜೋರಾಗಿ ಮಾತನಾಡುತ್ತಿದ್ದರು. ಒಳಗಡೆ ತಮ್ಮ ಕೆಲಸ ತಾವು ಮಾಡಿಕೊಳ್ಳುತ್ತಿದ್ದೆವು. ಮದ್ಯಾಹ್ನ ಊಟ ಆದ ನಂತರ 2.30 ಯಿಂದ 3.00 ಗಂಟೆ ಸಮಯದಲ್ಲಿ ಬ್ಯಾಲೆಟ್ ಬಾಕ್ಸ್ ಮೇಲೆ ಶಾಹಿ ಚೆಲ್ಲಿತ್ತು ಅಗ ತಾನು ಪ್ರಾಸಾ-1 ರವರಿಗೆ ತಿಳಿಸಿದ ತಕ್ಷಣ ತಾನು ಮತ್ತು ಪ್ರಾಸಾ-1 ರವರು ಪೋಲೀಸರು ಎಲ್ಲರೂ ಸೇರಿ ಶೋಧನೆ ಮಾಡಿದಾಗ ಒಬ್ಬ ವ್ಯಕ್ತಿ ಜೇಬಿನಲ್ಲಿ ಶಾಹಿ ಸೀಸೆಯನ್ನು ಇಟ್ಟು ಕೊಟ್ಟಿದ್ದು ಅದರ ಮುಚ್ಚಳ ತೆರೆದಿದ್ದ ಕಾರಣ ಅವನೇ ಆಗಿರಬಹುದು ಎಂದು ತಿಳಿದುಕೊಂಡು ಪೋಲೀಸರಿಗೆ ಶಾಹಿ ಸೀಸೆ ತೆರೆದಿರುವ ಕಾರಣ ಇವನೇ ಇರಬಹುದು ಎಂದು ಅವನನ್ನು ವಶಕ್ಕೆ ಪಡೆದುಕೊಂಡರು. ಆಗ ಪ್ರಾಸಾ-1 ರವರು ನಿಪಿ-1 ರಂತೆ ಪೋಲೀಸರಿಗೆ ದೂರನ್ನು ನೀಡಿರುತ್ತಾರೆ. ನಂತರ ಪೋಲೀಸರು ಬಂದು ನಿಪಿ-3 ರಂತೆ ಮಹಜರು ಕ್ರಮ ಜರುಗಿಸಿ ಕಬ್ಬಿಣದ ಪೆಟ್ಟಿಗೆ ಮತ್ತು ಬ್ಯಾಲೆಟ್ ಪೇಪರ್ ಗಳನ್ನು ವಶಕ್ಕೆಪಡೆದುಕೊಂಡರು. ನಿಪಿ-2 ಕ್ಕೆ ಯಾವ ಪೋಲೀಸರು ಸಹಿ ಮಾಡಲು ಹೇಳಿದಾಗ ಸಹಿ ಮಾಡಿರುತ್ತೇನೆ ಸಾಕ್ಷಿಯ ಸಹಿಯನ್ನು ನಿಪಿ-2 ಬಿ ಎಂದು ಗುರುತಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ

4. ಪ್ರಾಸಾ.5/ ಚೈತನ್ಯ ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ, ತಾನು ಠಾಣಾ ಪ್ರಭಾರೆಯಲ್ಲಿದ್ದಾಗ ಪಿರ್ಯಾದುದಾರರಾದ ಚಾಸಾ.1 ರವರು ಚುನಾವಣಾ ಪಿಎಲ್‌ಡಿ ಬ್ಯಾಂಕ್, ಚನ್ನಪಟ್ಟಣ ಚುನಾವಣಾ ಅಧಿಕಾರಿಯಾಗಿ ನೇಮಕಗೊಂಡಿದ್ದು ಸದರಿಯವರು ದಿಃ26.08.2018 ರಂದು ಮಧ್ಯಾಹ್ನ 15.10 ನಿಮಿಷಕ್ಕೆ ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆಃ45/2018 ರಲ್ಲಿ ಜನಪ್ರತಿನಿಧಿ ಕಾಯಿದೆ ಕಲಂ 136, ಐಪಿಸಿ ಕಲಂ 506 ಮತ್ತು 353 ರ ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡಿದ್ದು, ಪಿರ್ಯಾದು ಈಗಾಗಲೇ ನಿ.ಪಿ.1 ಎಂದು ಗುರುತಿಸಲಾಗಿದ್ದು, ಪಿರ್ಯಾದಲ್ಲಿರುವ ಸಹಿಯನ್ನು ಗುರುತಿಸಲಾಯಿತು. ಪ್ರ.ವ.ವ.ಯನ್ನು ನಿ.ಪಿ.7 ಎಂದು ಗುರುತಿಸಲಾಯಿತು. ಪಿರ್ಯಾದು ನೀಡಿದ ದಿನವೇ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಪಂಚರುದಾರರಾದ ಚಾಸಾ.2 ಮತ್ತು ಚಾಸಾ.3 ರವರ ಸಮಕ್ಷಮ ಕೃತ್ಯ ನಡೆದ ಸ್ಥಳದ ಪಂಚನಾಮೆ ಜರುಗಿಸಿ ಸ್ಥಳದಲ್ಲಿ ಚಾಸಾ.1 ರವರು ಹಾಜರುಪಡಿಸಿದ ಕಬ್ಬಿಣದ ಮತಪೆಟ್ಟಿಗೆ ಮತ್ತು ಮತಪತ್ರಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಸಂಜೆ 4.15 ರಿಂದ 4.45 ರವರೆಗೆ ಸ್ಥಳದಲ್ಲಿ ಪಂಚನಾಮೆ ಕ್ರಮ ಜರುಗಿಸಿರುತ್ತೇನೆ. ಸ್ಥಳ ಪಂಚನಾಮೆ ಈಗಾಗಲೇ ನಿ.ಪಿ.3 ಎಂದು ಗುರುತಿಸಲಾಗಿದ್ದು, ಮತಪೆಟ್ಟಿಗೆಯನ್ನು ತಮ್ಮ ಠಾಣಾ ಮಾಲುಪಟ್ಟಿ ಸಂಖ್ಯೆ.26/2018 ಎಂದು ನಮೂದಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ

5. ಪ್ರಾಸಾ.5/ ಚೈತನ್ಯ ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನುಡಿಯುವುದೇನೆಂದರೆ, ಮಾಲುಪಟ್ಟಿಯನ್ನು ನಿ.ಪಿ.8 ಎಂದು ಗುರುತಿಸಲಾಗಿದ್ದು, ಅದೇ ದಿನ ಸಮಯ ಸುಮಾರು 17.30 ರಿಂದ 18.20 ಗಂಟೆ ಸಮಯದಲ್ಲಿ ಚಾಸಾ.2 ಮತ್ತು 4 ರವರ ಸಮಕ್ಷಮ ಆರೋಪಿಯ ಅಂಗಶೋಧನೆ ಕ್ರಮ ಜರುಗಿಸಿ ಆತನ ಬಳಿ ಇದ್ದ ನೀಲಿಬಣ್ಣದ ಗಾಜಿನ ಇಂಕ್ ಬಾಟಲಿಯನ್ನು ಮತ್ತು ತುಂಬುತೋಳಿನ ಬಿಳಿಬಣ್ಣದ ಅಂಗಿಯನ್ನು ಅಮಾನತ್ತುಪಡಿಸಿಕೊಂಡಿದ್ದು, ಸದರಿ ಅಂಗಿ ಮತ್ತು ಇಂಕಿನ ಬಾಟಲಿಯನ್ನು ಈಗಾಗಲೇ ಮೇಲೆ ಹೇಳಿದ ಠಾಣಾ ಮಾಲುಪಟ್ಟಿ ಸಂಖ್ಯೆ.26/2018 ರಲ್ಲಿ ನಮೂದಿಸಿಕೊಂಡಿದ್ದು ಅಂಗಶೋಧನಾ ಪಂಚನಾಮೆಯನ್ನು ಈಗಾಗಲೇ ನಿ.ಪಿ.2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ

ಸಹಿಯನ್ನು ನಿ.ಪಿ.2(ಸಿ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ.6 ಮತ್ತು 7 ರವರ ಹೇಳಿಕೆಗಳನ್ನು ಪಡೆದು ಕೇಸಿನ ಕಡತಕ್ಕೆ ಅಳವಡಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ

6. ಪ್ರಾಸಾ.5/ ಚೈತನ್ಯ ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನುಡಿಯುವುದೇನೆಂದರೆ, ದಿಃ20.09.2018 ರಂದು ಚಾಸಾ.1 ಮತ್ತು 2 ರವರು ಚುನಾವಣಾ ಕರ್ತವ್ಯಕ್ಕೆ ನೇಮಕಗೊಂಡ ಬಗ್ಗೆ ತಹಶೀಲ್ದಾರ್, ಚನ್ನಪಟ್ಟಣರವರಿಂದ ಆದೇಶದ ಪ್ರತಿಯನ್ನು ಪಡೆದು ಈ ಕೇಸಿನ ಕಡತಕ್ಕೆ ಅಳವಡಿಸಿಕೊಂಡಿದ್ದು, ಸದರಿ ದಾಖಲೆ ಈಗಾಗಲೇ ನಿ.ಪಿ.5 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಹಿಯನ್ನು ಗುರುತಿಸಲಾಯಿತು. ನಂತರ ಈ ಕೇಸಿನ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಯ ವಿರುದ್ದ ಸಾಕ್ಷ್ಯಾಧಾರಗಳು ಕಂಡುಬಂದಿದ್ದರಿಂದ ಅಂತಿಮ ವರದಿ ಸಲ್ಲಿಸಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುವುದಾಗಿ ಮು.ಮಾ.1 ಮತಪೆಟ್ಟಿಗೆ ಮತ್ತು ಮು.ಮಾ.2 ಇಂಕು ಬಾಟಲಿಯನ್ನು ಗುರುತಿಸಿರುವುದಾಗಿ , ಇಂಕು ಆಗಿರುವ ಬಿಳಿಬಣ್ಣದ ಅಂಗಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ಮು.ಮಾ.3 ಎಂದು ಗುರುತಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ

7. ಪ್ರಾಸಾ.4/ಶ್ರೀ ನಾಗರಾಜು ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ, ಚಾಸಾ-3 ತನಗೆ ಗೊತ್ತು. ಆರೋಪಿ ಗೊತ್ತು, ತಮ್ಮ ಗ್ರಾಮದ ಪಕ್ಕದ ಊರಿನವರು, ಅಂಗ ಶೋಧನೆ ಮಹಜರ್ ಅನ್ನು ನಿಪಿ-2 ಎಂದು ಗುರುತಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ

8. ನಿಮ್ಮ ಪರವಾಗಿ ಬೇರೆ ಏನಾದರೂ ಹೇಳುವುದು ಇದೆಯೋ?
ಉತ್ತರ ಃ

09. ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ಇದೆಯೇ?

ಉತ್ತರ ಃ

ದಂ.ಪ್ರ.ಸಂ.ಕಲಂ.281 ರಡಿಯಲ್ಲಿ ಪ್ರಮಾಣ ಪತ್ರ

ಸಾಕ್ಷ್ಯದಲ್ಲಿ ಆರೋಪಿತನ ವಿರುದ್ಧ ಕಂಡು ಬಂದ ಅಂಶಗಳನ್ನು ಸಿ.ಆರ್.ಪಿ.ಸಿ. ಕಲಂ.313 ರಡಿಯಲ್ಲಿ ಪ್ರಶ್ನೆಗಳನ್ನು ರಚಿಸಿ, ಆರೋಪಿತನಿಗೆ ನ್ಯಾಯಾಲಯದಲ್ಲಿ ಓದಿ, ತಿಳಿಸಿ ಪ್ರಶ್ನಿಸಿ ಕೇಳಲಾಯಿತು. ಆರೋಪಿತನು ಸದರಿ ಪ್ರಶ್ನೆಗಳನ್ನು ತಿಳಿದುಕೊಂಡು ಉತ್ತರವನ್ನು ಕೊಟ್ಟಿರುತ್ತಾನೆ. ಆರೋಪಿತನ ಹೇಳಿಕೆಯಂತೇಯೇ ಉತ್ತರವನ್ನು ಬರೆದುಕೊಳ್ಳಲಾಯಿತು.

ದಿನಾಂಕ 18.06.2026

ಅಪರ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ. ಚನ್ನಪಟ್ಟಣ.